ಶ್ರೀ ಪಂಪಾಪತಿ.—ಅವರಿಗೆ ಪರಿಹಾರ ಸಿಕ್ಕಿಲ್ಲ. ಅವರು ಹೇಗೆ ಜೀವನ ಮಾಡಬೇಕು. ರೈತರು ಐದು ದಿವಸಗಳಿಂದ ಉಪವಾಸ ಮಾಡುತ್ತಿದ್ದಾರೆ. ಸಹಕಾರ ಮಂತ್ರಿಗಳು ಪರಿಹಾರವನ್ನು ಕೊಡುವುದರ ಬಗ್ಗೆ ಮಾನ್ಯ ಸಚಿವರು ಏನು ಉತ್ತರ ಹೇಳಲಿಲ್ಲ.

ಉಪಾಧ್ಯಕ್ಷರು.—ಅದರ ಬಗ್ಗೆ ಸಾಕಷ್ಟು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಿಲುವಳಿ ಸೂಚನೆಯ ಬಗ್ಗೆ ಇವ್ಯು ಪ್ರಶ್ನೆಯನ್ನು ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಪಂಪಾಪತಿ.—ಮಾನ್ಯ ಕಾರ್ಮಿಕ ಸಚಿವರಿಗೆ ಅಲ್ಲಿಯ ಕಾರ್ಮಿಕರ ಬಗ್ಗೆ ಎಲ್ಲಾ ಗೊತ್ತಿದೆ. ಲೇಆಫ್ ಕೊಡಿಸುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು.—ಇದರ ಬಗ್ಗೆ ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ. ಮೂರು ಜನ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ತಾವೂ ಕೂಡ ಮಾತನಾಡಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಮಾತನ್ನು ಹೇಳಲೇಬೇಕಾಗಿದೆ. ಮಾನ್ಯ ಮಂತ್ರಿಗಳು ಹಿಂದೆರಡು ಮಾತುಗಳನ್ನು ಹೇಳಿದ್ದಾರೆ. ಅವರು ಹೇಳಿದ ಮೇಲೆ ನಾವು ಹೇಳಲೇಬೇಕಾಗಿದೆ. ಅವರ ನಿಲುವು ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಿಲ್ಲ.

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಸಚಿವರು ಹೇಳಬೇಕಾದ್ದನ್ನೆಲ್ಲ ಹೇಳಿದ್ದಾರೆ. ಆದ್ದರಿಂದ ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ.

ಉಪಾಧ್ಯಕ್ಷರು.—ನೀವು ಏನು ಹೇಳಬೇಕೋ ಹೇಳಿದ್ದೀರಿ. ಮತ್ತೆ ಪುನಃ ಏತಕ್ಕೆ ಮಾತನಾಡುತ್ತಿದ್ದೀರಿ ?

ಶ್ರೀ ಕೆ. ವಸಂತ ಬಂಗೇರ.—ಸ್ವಾಮಿ, ನಮಗೆ ಕೊಲೆ ಬೆದರಿಕೆ ಹಾಕುತ್ತಿದ್ದಾರೆ. ಇದನ್ನು ನಾವು ಯಾರಲ್ಲಿ ಹೇಳಿಕೊಳ್ಳಬೇಕು ?

(ಗೊಂದಲ)

ಶ್ರೀ ಪಂಪಾಪತಿ.—ಇವರಿಂದ ನಮ್ಮ ದೇಶ ಉರಿಯುತ್ತಿದೆ. ಆದ್ದರಿಂದ ನಾವು.....

ಶ್ರೀ ಕೆ. ವಸಂತ ಬಂಗೇರ.—ಸ್ವಾಮಿ, ನಮಗೆ ರಕ್ಷಣೆಯನ್ನು ಕೊಡಬೇಕು.

ಶ್ರೀ ಪಂಪಾಪತಿ.—ಮಾನ್ಯ ಉಪಾಧ್ಯಕ್ಷರೆ, ಇದರ ಹಿತಕ್ಕೋಸ್ಕರ ದೇಶ ಹಾಳಾಗುವುದಕ್ಕೆ ನಾವು ಬಿಡುವುದಿಲ್ಲ.

(ಗೊಂದಲ)

ಶ್ರೀ ಕೆ. ವಸಂತ ಬಂಗೇರ.—ಈ ಬಗ್ಗೆ ನಮಗೆ ಸೂಕ್ತ ರಕ್ಷಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೆ ಪೋಲೀಸರನ್ನು ಕಳುಹಿಸಿಕೊಟ್ಟು ರಕ್ಷಣೆ ಕೊಡಿ.

ಗಮನ ಸೆಳೆಯುವ ಸೂಚನೆ

ಕರ್ನಾಟಕ ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಚೆಕ್ಕುಗಳ ಹಣ ಕರ್ನಾಟಕ ಕೇಂದ್ರ ಸಹಕಾರಿ ಬ್ಯಾಂಕಿಗೆ ಸಂದಾಯವಾಗದಿರುವ ಬಗ್ಗೆ

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಚೆಕ್ಕುಗಳ ಹಣ ಕರ್ನಾಟಕ ಕೇಂದ್ರ ಸಹಕಾರಿ ಬ್ಯಾಂಕ್‌ಗೆ ಸಂದಾಯವಾಗದಿರುವ ಬಗ್ಗೆ ಮಾನ್ಯ ಸಹಕಾರಿ ಸಂಘದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರಿ ಸಚಿವರು) —ಕರ್ನಾಟಕ ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಧಾರವಾಡ ಶಾಖೆಯು ಫೆಬ್ರುವರಿ ೧೯೮೫ರಲ್ಲಿ ಅಕ್ಕಿ ಆಲೂರಿನಲ್ಲಿರುವ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಸದಸ್ಯರಿಗೆ ಸಾಲ ಹಂಚಿಕೆಯ ಸಲುವಾಗಿ ಒಟ್ಟು ರೂ. ೧೩,೮೦೦-೦೦ ಗಳಿಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಐದು ಚೆಕ್ಕುಗಳನ್ನು ನೀಡಿತು. ಈ ಚೆಕ್ಕುಗಳನ್ನು ಕರ್ನಾಟಕ ಕೇಂದ್ರ ಸಹಕಾರಿ ಬ್ಯಾಂಕಿನ ಅಕ್ಕಿ ಆಲೂರು ಶಾಖೆಯಲ್ಲಿ ಕೊಟ್ಟಾಗ ಅವರು ಅದನ್ನು ತೆಗೆದುಕೊಂಡು ಚೆಕ್ಕುದಾರರಿಗೆ ಹಣ ನೀಡಿದರು. ಅಷಂತರ ಈ ಚೆಕ್ಕುಗಳು ಅಪೆಕ್ಸ್ ಬ್ಯಾಂಕಿಗೆ ಬಂದು ಕರ್ನಾಟಕ ಕೇಂದ್ರ ಸಹಕಾರಿ ಬ್ಯಾಂಕಿಗೆ ಹಣ ವರ್ಗಾವಣೆಯಾಗ ಬೇಕಿತ್ತು. ಆದರೆ ಈ ಚೆಕ್ಕುಗಳು ಅಪೆಕ್ಸ್ ಬ್ಯಾಂಕಿಗೆ ಬರಲಿಲ್ಲ. ರಾಜ್ಯ ಕೃಷಿ ಹಾಗೂ ಗ್ರಾಮೀಣ ಬ್ಯಾಂಕಿನ ಧಾರವಾಡ ಶಾಖೆಯವರು ಈ ಚೆಕ್ಕುಗಳು ಕಳೆದುಹೋಗಿವೆ ಎಂದು ಅಪೆಕ್ಸ್ ಬ್ಯಾಂಕಿನವರಿಗೆ ೨೪-೩-೧೯೮೫ರ ಪತ್ರದ ಮೂಲಕ ತಿಳಿಸಿದ್ದಾರೆ. ಅಪೆಕ್ಸ್ ಬ್ಯಾಂಕಿನವರು ಈ ಚೆಕ್ಕುಗಳು ತಮಗೆ ತಲುಪಿಲ್ಲವೆಂದು ಮತ್ತು ಈ ಚೆಕ್ಕುಗಳ ಬಗ್ಗೆ ತಮ್ಮಿಂದ ಹಣ ಸಂದಾಯವಾಗಿಲ್ಲವೆಂದು ರಾಜ್ಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಧಾರವಾಡ ಶಾಖೆಗೆ ತಿಳಿಸಿ ಚೆಕ್ಕುಗಳು ಒಂದು ವೇಳೆ ಸಿಕ್ಕಿದರೂ ಸಹ ಅವುಗಳ ಕಾಲಾವಧಿ ಮೀರಿರುವುದರಿಂದ ಹೊಸ ಚೆಕ್ಕುಗಳನ್ನು ನೀಡಬೇಕೆಂದು ತಿಳಿಸಿದ್ದಾರೆ. ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಧಾರವಾಡ ಶಾಖೆಯು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಿದೆ.

ಇದರಿಂದ ಸಂಬಂಧಪಟ್ಟವರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಧಾರವಾಡದ ಕರ್ನಾಟಕ ಕೇಂದ್ರ ಸಹಕಾರಿ ಬ್ಯಾಂಕು ಯೋಜನೆಯೊಂದನ್ನು ರೂಪಿಸಿದೆ. ಇದರ ಪ್ರಕಾರ ಕೇಂದ್ರ ಸಹಕಾರಿ ಬ್ಯಾಂಕು ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ ರೂ. ಐದು ಲಕ್ಷಗಳ ಮಿತಿಯಂಥ್ಲ ಓವರ್ ಡ್ರಾಫ್ಟ್ ಸೌಲಭ್ಯವನ್ನು ಮಂಜೂರು ಮಾಡುತ್ತದೆ. ಆಗ ಚೆಕ್ಕುಗಳು ಬೆಂಗಳೂರಿಗೆ ಬರುವ ಅಗತ್ಯವಿಲ್ಲದೆ ಧಾರವಾಡದಲ್ಲಿಯೇ ಜಮಾ ಆಗಂವುದು. ಓವರ್ ಡ್ರಾಫ್ಟ್ ಖಾತೆಯಂ ಮಿತಿಮೀರದಂತೆ ರಾಜ್ಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕು ನೋಡಿಕೊಳ್ಳುವುದು. ಈ ಯೋಜನೆಯನ್ನು ೧-೯-೧೯೮೫ ರಿಂದ ಜಾರಿಗೆ ತರಲು ಕರ್ನಾಟಕ ಕೇಂದ್ರ ಸಹಕಾರಿ ಬ್ಯಾಂಕು ನಿರ್ಧರಿಸಿದೆಯೆಂದು ತಿಳಿದು ಬಂದಿದೆ.

ಆಲಂದ್‌ನ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಯಚಟುವಟಿಕೆಗಳ ಬಗ್ಗೆ

ಶ್ರೀ ಶರಣಬಸಪ್ಪ ಮಾಲಿ ಡಿ. ಪಾಟೀಲ್.—ಅಧ್ಯಕ್ಷರೆ, ನಾನು ಮಾನ್ಯ ಸಹಕಾರ ಸಚಿವರ ಗಮನವನ್ನು ಆಲಂದ್‌ನ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಯಚಟುವಟಿಕೆಗಳ ಬಗ್ಗೆ ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಗುಲ್ಬರ್ಗಾ ಜಿಲ್ಲೆಯ ಆಲಂದ ತಾಲ್ಲೂಕಿನ ಭೂಸನೂರ್ ಗ್ರಾಮದಲ್ಲಿ ಆಲಂದ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲಾಗಿದ್ದು, ಸದ್ರಿ ಕಾರ್ಖಾನೆಗೆ ಷೇರು ಹಣ ವಸೂಲಿ ಮಾಡುವಾಗ ಷೇರು ಸರ್ಟಿಫಿಕೇಟ್‌ಗಳನ್ನು ಕೊಟ್ಟಿರುವುದಿಲ್ಲ. ಕಾರಣ ಷೇರು ಹಣ ವಸೂಲಿ ಮಾಡುವಾಗ ಷೇರುದಾರರಿಂದ ಕೂಲಂಕಂಷವಾದ ವಿವರಗಳನ್ನು ಹಾಗೂ ಅವರ ವಾರಸುದಾರರ ವಿವರಗಳನ್ನು ಹೊಂದಿರದೇ ಇರುವುದರಿಂದ ಈ ಅನಾನುಕೂಲವಾಯಿತು. ಈಗ ಎಲ್ಲಾ ವಿವರಗಳನ್ನು ಶೇಖರಿಸಿದ್ದು, ಸರ್ಟಿಫಿಕೇಟುಗಳನ್ನು ಷೇರುದಾರರಿಗೆ ಶೀಘ್ರವಾಗಿ ಕೊಡಲಾಗುವುದು.

ಸರ್ಕಾರವು ತನ್ನ ಅಧಿಸೂಚನೆ ನಂ. ಆರ್‌ಡಿಸಿ ೩೦ ಸಿಒಎಫ್ ೮೪, ತಾರೀಖು ೨೮-೩-೧೯೮೪ರಲ್ಲಿ ಕಾರ್ಖಾನೆಯ ಆಡಳಿತ ವರ್ಗಕ್ಕೆ ಬೈಲಾ ನಂ. ೨೨ (೧) ರಂತೆ ಸಂಪೂರ್ಣವಾಗಿ ನಿರ್ದೇಶಕರನ್ನು ನಾಮಕರಣ ಮಾಡಿರುತ್ತಾರೆ. ಇದರಲ್ಲಿ ಗುಲ್ಬರ್ಗಾ ಜಿಲ್ಲಾಧಿಕಾರಿಗಳನ್ನು ಕಾರ್ಖಾನೆಯ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಇದರಿಂದ ಅಧ್ಯಕ್ಷರೊಬ್ಬರನ್ನ ಸರ್ಕಾರ ನಾಮಕರಣ ಮಾಡಿದೆ. ಎಂಬುವ ಅಂಶ ಸರಿಹೊಂದುವುದಿಲ್ಲ ಆದರೆ ಜಿಲ್ಲಾಧಿಕಾರಿಯವರು ತಮ್ಮ ಸಂಪೂರ್ಣ ಕಾಲವನ್ನು ಕಾರ್ಖಾನೆಯ ಕೆಲಸಗಳಿಗೆ ವಿನಿಯೋಗಿಸಲು ಸಾಧ್ಯವಿಲ್ಲದೆ ಇರುವುದರಿಂದ ಕಾರ್ಖಾನೆಯ ಕೆಲಸಗಳನ್ನು ಚುರುಕುಗೊಳಿಸುವ ದೃಷ್ಟಿಯಿಂದ ಸರ್ಕಾರವು ಪುನಃ ತನ್ನ ಅಧಿಸೂಚನೆ ನಂ. ಸಿಎಂಡಬ್ಲ್ಯೂಕೆ ೪೯ ಸಿಒಎಫ್ ೮೫, ತಾರೀಖು ೩-೫-೧೯೮೫ರಲ್ಲಿ ಜಿಲ್ಲಾಧಿಕಾರಿಗಳ ಸ್ಥಾನದಲ್ಲಿ ಶ್ರೀ ಬಿ. ಆರ್. ಪಾಟೀಲ್ ಅವರನ್ನು ಕಾರ್ಖಾನೆಯ ಅಧ್ಯಕ್ಷರನ್ನಾಗಿ ನಾಮಕರಣ ಮಾಡಲಾಗಿದೆ ಮತ್ತು ಜಿಲ್ಲಾಧಿಕಾರಿಗಳವರು ಕಾರ್ಯಕಾರಿ ಮಂಡಳಿಯಲ್ಲಿ ಸರ್ಕಾರಿ ನಿರ್ದೇಶಕರಾಗಿ ಮುಂದುವರಿದಿರುತ್ತಾರೆ.